5407(6046) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ 2 ವರ್ಷಗಳಲ್ಲಿ ಕರ್ನಾಟಕ ಸರ್ಕಾರ ನಡೆಸುವ ಲಾಟರಿಗಳಿಂದ ಸಂಗ್ರಹಿಸಲಾಗಿರುವ ಹಣ ಎಷ್ಟು? (ವರ್ಷಾವಾರು ವಿವರ ನೀಡುವುದು)

ಆ) ಈ ವ್ಯವಸ್ಥೆ ನಡೆಸಲು ವೆಚ್ಚವಾದ ಹಣ ಎಷ್ಟು? (ವರ್ಷಾವಾರು ವಿವರ ನೀಡುವುದು);

ಇ) ಈ ವ್ಯವಸ್ಥೆಯಿಂದ ಎಲ್ಲ ವೆಚ್ಚಗಳನ್ನು ತೆಗೆದು ಸರ್ಕಾರಕ್ಕೆ ಬಂದ ನಿವ್ವಳ ಆದಾಯ ಎಷ್ಟು? (ವರ್ಷಾವಾರು ವಿವರ ನೀಡುವುದು);

ಈ) ಒಂದು ರೀತಿ ಜೂಜಿನ ಮನೋಭಾವ ಬೆಳೆಸುವ, ಶ್ರಮವಿಲ್ಲದ ಗಳಿಕೆಗೆ ಅಸೆಪಡುವ ಸ್ಥಿತಿ ನಿರ್ಮಿಸುವ ವ್ಯಸನವಾಗಿರುವ ಲಾಟರಿ ನಿಲ್ಲಿಸಲು ಸರ್ಕಾರ ಕ್ರಮಕ್ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್. ಹೊರಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಕಳೆದ 2 ವರ್ಷಗಳಲ್ಲಿ ಕರ್ನಾಟಕ ಸರ್ಕಾರ ನಡೆಸುವ ಲಾಟರಿಗಳ ವಹಿವಾಟಿನಿಂದ ಸಂಗ್ರಹಿಸಲಾದ ಹಣ ಈ ಕೆಳಕಂಡಂತೆ ಇರುತ್ತದೆ.

2003–3004, ರೂ. 1360.29 ಕೋಟಿ

2004–2005, ರೂ. 2102.52 ಕೋಟಿ

ಆ) ಕರ್ನಾಟಕ ರಾಜ್ಯ ಲಾಟಿ ಬಹುಮಾನ ಪಾವತಿ ಏಜೆಂಟ್‌ರ ಕಮಿಷನ್, ಟಿಕೇಟ್ ಮುದ್ರಣ, ತೆರಿಗೆ ಹಾಗೂ ಇತರೆ ವೆಚ್ಚಗಳನ್ನೊಳಗೊಂಡಂತೆ ಈ ವ್ಯವಸ್ಥೆ ನಡೆಸಲು ಆದ ವೆಚ್ಚದ ವಿವರ ಈ ಕೆಳಕಂಡಂತಿದೆ.

2003–3004, ರೂ. 1310.29 ಕೋಟಿ

2004–2005, ರೂ. 2012.52 ಕೋಟಿ

ಇ) ಕರ್ನಾಟಕ ರಾಜ್ ಲಾಟರಿಯಿಂದ ಸರ್ಕಾರಕ್ಕೆ ಬಂದ ವರ್ಷಾವಾರು ನಿವ್ವಳ ಆದಾಯ ಈ ಕೆಳಕಂಡಂತೆ ಇರುತ್ತದೆ.

2003–3004, ರೂ. 50.00 ಕೋಟಿ

2004–2005, ರೂ. 90.00 ಕೋಟಿ

ಈ) ಸಧ್ಯಕ್ಕೆ ಇಲ್ಲ

5408(6291) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಒಂದು ದಶಕದಲ್ಲಿ ಪೊಲೀಸ್ ಸಿಬ್ಬಂದಿಯಲ್ಲಿ ಆದ ಹೆಚ್ಚಳ ಎಷ್ಟು: (ಗ್ರೇಡ್‌ವಾರು, ಜಿಲ್ಲಾವಾರು ಮಾಹಿತಿ ನೀಡುವುದು):

ಆ) ಜಿಲ್ಲೆಗಳಲ್ಲಿ ಕಳೆದ ಒಂದು ದಶಕದಲ್ಲಿ ಅಪರಾಧದ ಸಂಖ್ಯೆಯಲ್ಲಿ ಆದ ಹೆಚ್ಚಳ ಎಷ್ಟು (ಜಿಲ್ಲಾವಾರು ಅಪರಾಧವಾರು ಮಾಹಿತಿ ನೀಡುವುದು);

ಇ) ಮಾಹಿತಿ ಮತ್ತು ಇತರೆ ತಂತ್ರಜ್ಞಾನದಲ್ಲಿ ಆಗಿರುವ ಬೆಳೆವಣಿಗೆಯ ಹಿನ್ನೆಲೆಯಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗುವ ರೀತಿಯಲ್ಲಿ ವ್ಯವಸ್ಥೆಯಲ್ಲಿ ತಂದಿರುವ ಬದಲಾವಣೆಗಳು ಯಾವುವು:

ಈ) ಇವು ಎಷ್ಟು ಫಲದಾಯಕವಾಗಿರುವುವು: (ವಿವರ ನೀಡುವುದು):

ಉ) ಅಪರಾಧಿಗಳ ಹಾಗೂ ಅಪರಾಧಿಗಳ ಸಂಖ್ಯೆಯಲ್ಲಿ ಕಡಿತಗೊಳಿಸಲು ಸರ್ಕಾರದ ಕಾರ್ಯಕ್ರಮಗಳೇನು:

ಊ) ಈ ಕಾರ್ಯಕ್ರಮಗಳಿಗೆ ಕಳೆದ 3 ವರ್ಷಗಳಲ್ಲಿ ಆದ ವೆಚ್ಚ ಎಷ್ಟು?

ಶ್ರೀ ಧಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕಳೆದ ಒಂದು ದಶಕದಲ್ಲಿ 13462 ಪೊಲೀಸ್ ಸಿಬ್ಬಂದಿಗಳ ಹೆಚ್ಚಳವಾಗಿರುತ್ತದೆ. ಗ್ರೇಡ್‌ವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–ಅರಲ್ಲಿ ನೀಡಲಾಗಿದೆ.

ಆ) ರಾಜ್ಯದಲ್ಲಿ ಕಳೆದ ಒಂದು ದಶಕದಲ್ಲಿ ಅಂದರೆ 1996 ರಿಂದ 2005 (31.5.2005) ರವರೆಗೆ ವರದಿಯಾದ ಅಪರಾಧದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–ಆ ರಲ್ಲಿ ವಿವರಿಸಲಾಗಿದೆ.

ಇ) ಅಪರಾಧಿಗಳಿಗೆ ಶಿಕ್ಷೆಯಾಗುವ ರೀತಿಯಲ್ಲಿ ಈ ಕೆಳಗಿನ ಸೌಲಭ್ಯವನ್ನು ಒದಗಿಸಲಾಗಿದೆ.

1. ರಾಜ್ಯದಲ್ಲಿ ಸಂಭವಿಸುವ ಅಪರಾಧ ಮತ್ತು ಅಪರಾಧಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಅನುವಾಗಲು ನ್ಯಾಷನಲ್ ಕ್ರೈಂ ಬ್ಯೂರೋ (ಎನ್.ಸಿ.ಆರ್.ಬಿ) ಮತಿಯಿಂದ ಒದಗಿಸಲಾದ Crime Criminal Information System (CCIS) Software ನ್ನು ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಅಳವಡಿಸಲಾಗಿದೆ. ಈ ಪದ್ದತಿಯಿಂದ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ದಿನ ನಿತ್ಯ ದಾಖಲಾಗುವ ಮೊಕದ್ದಮೆಗಳ ವಿವರ ತನಿಖಾ ಪ್ರಗತಿ ಇತ್ಯಾದಿಗಳನ್ನು ಸಂಗ್ರಹಿಸಲು ಅನುಕೂಲಕರವಾಗಿರುತ್ತದೆ.

2. ನೆರರಾಜ್ಯಗಳ ಡಿ.ಜಿ ಮತ್ತು ಅಪರಾಧ ಮುಖ್ಯಸ್ಥರುಗಳ ಸಮ್ಮುಖದಲ್ಲಿ ಜರುಗಿದ ದಕ್ಷಿಣವಲಯ ಸಮನ್ವಯ ನೆರರಾಜ್ಯಗಳ ಪ್ರಾದೇಶಿಕ ಸಮನ್ವಯ ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದನ್ವಯ ನೆರರಾಜ್ಯಗಳಿಗೆ ನೆರವಾಗಲು Automated Finger Print System (AFPS) FACTS (Finger Print Analysis System and Criminal Tracing System) ಆಂತರಿಕ ಕಲ್ಪಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಈ ವ್ಯವಸ್ಥೆಯಿಂದ ಅಪರಾಧಿಗಳ ಬೆರಳು ಮುದ್ರೆಗಳನ್ನು ಗುರುತಿಸಲು ಹಾಗೂ ತ್ವರಿತ ಕ್ರಮ ತೆಗೆದುಕೊಳ್ಳಲು ಉಪಯುಕ್ತವಾಗಿರುತ್ತದೆ.

3. ಅಪರಾಧಿಗಳನ್ನು ತೀವ್ರ ಗುರುತಿಸುವಿಕೆಗಾಗಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳನ್ನು ಬೆಂಗಳೂರು ಕೇಂದ್ರ ಬೆರಳಚ್ಚು ಮುದ್ರೆ ಸಂಗ್ರಹಾಲಯದೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ.

4. ಎಲ್ಲಾ ಪೊಲೀಸ್ ನಿಯಂತ್ರಣ ಕೊಠಡಿಗಳಲ್ಲಿ ಧ್ವನಿ ದಾಖಲಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ.

5. ಎಲ್ಲಾ ಪೊಲೀಸ್ ಠಾಣೆಗಳಿಗೆ ಕಂಪ್ಯೂಟರ್ ಮತ್ತು ಸ್ಕ್ಯಾನ್ ಯಂತ್ರಗಳನ್ನು ನೀಡಲಾಗಿದೆ ಮತ್ತು ಈಮೇಲ್ ಸೌಕರ್ಯವನ್ನು ಕಲ್ಪಿಸಲಾಗಿದೆ.

6. ಎಲ್ಲಾ ಪೊಲೀಸ್ ಠಾಣೆಗಳಿಗೆ ಫ್ಯಾಕ್ಸ್ ಯಂತ್ರಗಳನ್ನು ಒದಗಿಸಲಾಗಿದೆ.

7. ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಅನುಮಾನಸ್ಪದ ವ್ಯಕ್ತಿಗಳಿಂದ ಮಾಹಿತಿ ಸಂಗ್ರಹಿಸಲು ಈ ಕೆಳಗಿನ ಪರೀಕ್ಷೆ ವ್ಯವಸ್ಥೆಯನ್ನು ಮಾಡಲಾಗಿದೆ.

ಅ. ಲೈ. ಡಿಟಕ್ಟರ್ (ಪಾಲಿಗ್ರಾಫ್ ಪರೀಕ್ಷೆ)

ಆ. ಪಿ–300 (ಬ್ರೈನ್ ಮ್ಯಾಪಿಂಗ್)

ಇ. ನಾರ್ಕೋ ಅನಾಲಿಸಸ್

ಈ. ಜಿ.ಎಸ್.ಆರ್.ಎ (ಗನ್ ಶಾಟ್ ರೆಸೆಡ್ಯೂ ಅನಾಲಿಸಸ್)

8. ರಾಜ್ಯದಲ್ಲಿರುವ ಎಲ್ಲಾ ಪೊಲೀಸ್ ಠಾಣೆಗಳಿಗೆ ಜೀಪನ್ನು ಒದಗಿಸಲಾಗಿದೆ ರಾಜ್ಯದಲ್ಲಿರುವ ಎಲ್ಲಾ ಪೊಲೀಸ್ ಹೊರ ಠಾಣೆಗಳಿಗೆ ಮೋಟಾರು ಸೈಕಲ್‌ನ್ನು ಒದಗಿಸಲಾಗಿದೆ.

9. ರಾಜ್ಯದಲ್ಲಿರುವ ಎಲ್ಲಾ ಪೊಲೀಸ್ ಠಾಣೆಗಳಿಗೆ ಗಸ್ತು ಕರ್ತವ್ಯವನ್ನು ನಿರ್ವಹಿಸಲು ಹೆಚ್ಚುವರಿಯಾಗಿ ವಾಕಿ–ಟಾಕಿಗಳನ್ನು ಒದಗಿಸಲಾಗಿದೆ.

10. ವೀಡಿಯೋ ಕಾಮೆರಾ/ಸ್ಟಿಲ್ ಕ್ಯಾಮರಾಗಳನ್ನು ಒದಗಿಸಲಾಗಿದೆ.

11. ಎಲ್ಲಾ ಜಿಲ್ಲೆ ಕೇಂದ್ರ ಸ್ಥಾನಗಳಿಗೂ ಪೊಲೀಸ್ ಪ್ರಧಾನ ಕಛೇರಿಯೊಂದಿಗೆ ವೀಡಿಯೋ ಕಾನ್‌ಫೆರೆನ್ಸಿಂಗ್ ವ್ಯವಸ್ಥೆ ಮಾಡಲಾಗಿದೆ. ಹೊಸ ತಂತ್ರಜ್ಞಾನುಳ್ಳ ಆಯುಧಗಳನ್ನು ಪೊಲೀಸರಿಗೆ ಒದಗಿಸಲಾಗಿದೆ.

ಈ) ಪೊಲೀಸ್ ಆಧುನೀಕರಣ ಯೋಜನೆ ಕಳೆದ ಮೂರು ವರ್ಷಗಳಿಂದ ಪ್ರಾರಂಭವಾಗಿದ್ದು ಈಗಲೂ ಮುಂದುವರೆದಿದೆ. ಅಪರಾಧ ಪ್ರಕರಣಗಳ ತಡೆ. ಪತ್ತೆ ಮತ್ತು ಅಭಿಯೋಗಳಲ್ಲಿ ತಾಂತ್ರಿಕ ಅಳವಡಿಕೆಯಿಂದಾಗಿ ಪೊಲೀಸ್ ಕರ್ತವ್ಯದಲ್ಲಿ ಹೆಚ್ಚಿನ ಚುರುಕುತನ, ಕಡಿಮೆ ವೇಳೆಯಲ್ಲಿ ಪ್ರತಿಕ್ರಿಯೆ, ಮೀಡಿಯೋಗ್ರಾಫಿ ಮತ್ತು ಫೋಟೋಗ್ರಾಪಿ ಮುಖಾಂತರ ಸಾಕಷ್ಟು ಸಾಕ್ಷ್ಯಗಳ ಸಂಗ್ರಹದಿಂದಾಗಿ ಹೆಚ್ಚಿನ ವ್ಯತಾಸ ಮತ್ತು ಫಲಶ್ರುತಿ ಕಂಡು ಬಂದಿದೆ. ಅಲ್ಲದೆ, ಮುಂಬರುವ ದಿನಗಳಲ್ಲಿ ಈ ತಾಂತ್ರಿಕತೆಯ ಬದಲಾವಣೆಯಿಂದ ಇನ್ನೂ ಹೆಚ್ಚಿನ ಮತ್ತು ಮಹತ್ತರವಾದ ಫಲಿತಾಂಶವನ್ನು ನಿರೀಕ್ಷಿಸಲಾಗಿದೆ.

ಉ) ಅಪರಾಧಗಳ ಹಾಗೂ ಅಪರಾಧಿಗಳ ಸಂಖ್ಯೆಯಲ್ಲಿ ಕಡಿತಗೊಳಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಹಗಲು ಗಸ್ತು, ರಾತ್ರಿ ಗಸ್ತು ಹಾಗೂ ಹಳ್ಳಿಗಳ ಬೀಟ್ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ. ವಾಹನಗಳಿಂದ ರೋಡ್ ಪೆಟ್ರೋಲಿಂಗ್, ಹೆದ್ದಾರಿ ಪೆಟ್ರೋಲಿಂಗ್ ಮತ್ತು ಅಪರಾಧ ಸಂಭವಿಸುವಂತಹ ಸ್ಥಳಗಳಲ್ಲಿ ಪಿಕೆಟಿಂಗ್ ನೇಮಿಸಲಾಗುತ್ತಿದೆ ಕರಾಳ ರಾತ್ರಿಯಂದು ನಾಕಾ ಬಂದಿ ವಗೈರೆ ಮಾಡಲಾಗುತ್ತಿದೆ ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳೊಡನೆ ಇವುಗಳನ್ನು ತಡೆಗಟ್ಟಲು ಸಂಪರ್ಕಿಸಲಾಗುತ್ತಿದೆ.

2. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯಲ್ಲಿ ಗಸ್ತು ತಿರುಗಲು ಅನುವಾಗಲು ವಿವಿಧ ಘಟಕಗಳಿಗೆ 38 ಗಸ್ತುವಾಹನವನ್ನು ಒದಗಿಸಲಾಗಿದೆ.

3. ರಾಜ್ಯದಲ್ಲಿರುವ ಎಲ್ಲಾ ಪೊಲೀಸ್ ಠಾಣೆಗಳು ಹಾಗೂ ರೈಲ್ವೆ ಘಟಕದ ಎಲ್ಲಾ ಪೊಲೀಸ್ ಠಾಣೆಗಳಿಗೂ ವೈರ್‌ಲೆಸ್ ಸಂಪರ್ಕ ಒದಗಿಸಲಾಗಿದೆ.

4. ಬೆಂಗಳೂರು ನಗರದಲ್ಲಿ ಈ–ಬೀಟ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

5. ಬೆಂಗಳೂರು ನಗರದಲ್ಲಿ 24 ಗಂಟೆಯೂ ಪೊಲೀಸ್ ಹೊಯ್ಸಳ ಮತ್ತು ಚೀತಾ ವಾಹನಗಳನ್ನು ಠಾಣಾ ಸರಹದ್ದಿನ ಗಸ್ತು ಕರ್ತವ್ಯಕ್ಕತೆ ನಿಯೋಜಿಸಲಾಗಿರುತ್ತದೆ.

6. ರಾಜ್ಯದಲ್ಲಿ ನಡೆಯುವ ದರೋಡೆ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಪತ್ತೆ ಹಚ್ಚಲು ಸಿ.ಓ.ಡಿ ಘಟಕದ ಎಸ್.ಪಿ./ಡಿ.ಎಸ್.ಪಿ ಸಿಬ್ಬಂದಿಗಳನ್ನು ಒಳಗೊಂಡ ದರೋಡೆ ಪ್ರತಿಬಂಧಕ ದಳಗಳನ್ನು ಬೆಂಗಳೂರು, ಬಳ್ಳಾರಿ ಮತ್ತು ಗುಲ್ಬರ್ಗಾದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

7. ಎಲ್ಲಾ ಪೊಲೀಸ್ ಠಾಣಾ ಸರಹದ್ದುಗಳಲ್ಲಿ ಆಯಾ ಠಾಣೆಯ ಸಿಬ್ಬಂದಿಗಳನ್ನು ರಾತ್ರಿ ಮತ್ತು ಹಗಲು ಗಸ್ತು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

8. ನಗರದ ಹೊರವಲಯಗಳಲ್ಲಿರುವ ವಸತಿ ಗೃಹಗಳ ಮೇಲೆ ನಿಗಾ ವಹಿಸಿ ಗಸ್ತು ಮಾಡಲು ಸಿಬ್ಬಂದಿಗಳಿಗೆ ಸೂಚಿಸಲಾಗಿರುತ್ತದೆ.

9. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯಲ್ಲಿ ನಡೆಯುವ ದರೋಡೆಗಳನ್ನು ತಡೆಗಟ್ಟಲು 30 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ.

ಊ) ಈ ಮೇಲಿನ ಕಾರ್ಯಕ್ರಮಗಳಿಗೆ ಆಧುನೀಕರಣ ಯೋಜನೆ ಅಡಿಯಲ್ಲಿ ಹಾಗೂ 11ನೇ ಹಣಕಾಸಿನ ಆಯೋಗದಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2002–03ರಲ್ಲಿ ರೂ. 134.19.83.756/– 2003–04 ರಲ್ಲಿ ರೂ. 75,26,05,873/– ಮತ್ತು 2004–05 ರಲ್ಲಿ ರೂ. 10,24,97,000/– ಹಣವನ್ನು ವೆಚ್ಚ ಮಾಡಲಾಗಿರುತ್ತದೆ.